# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2020 ರ ಮುಂಗಾರು ಹಂಗಾಮಿಗೆ ತೋಟಗಾರಿಕೆ ಬೆಳೆಗಳನ್ನು ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (R-WBCIS) ಅಡಿ ನೋಂದಾಯಿಸಲು ಅಂತಿಮ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:

1. **ಸರ್ಕಾರದ ಆದೇಶ ಸಂಖ್ಯೆ:ತೋಇ** 208 **ತೋಸವಿ** 2020 **ಬೆಂಗಳೂರು ದಿನಾಂಕ**:25-06-2020
2. **ಸರ್ಕಾರದ ಆದೇಶ ಸಂಖ್ಯೆ:ತೋಇ** 216 **ತೋಸವಿ** 2020 **ಬೆಂಗಳೂರು ದಿನಾಂಕ**:29-06-2020
3. Agriculture Insurance Company of India e-mail, Dated: 29-06-2020 and 30-06-2020.
4. HDFC ERGO General Insurance Company e-mail, Dated: 30-06-2020.
5. SBI General Insurance Company e-mail, Dated: 30-06-2020.
6. ಪತ್ರ ಸಂಖ್ಯೆ :ತೋಇ/ತೋಜಂನಿ/ತೋಇಅ–ಯೋನಿಘ / ಸತೋಅ-1(ಬೆವಿ)/01/2020-21 ದಿನಾಂಕ:29-06-2020 ಮತ್ತು 30-06-2020
7. ಕೇಂದ್ರ ಸರ್ಕಾರದ ಪತ್ರ ಸಂ:13012/04/2017 – Cr.II (FTS No. 75491) ದಿನಾಂಕ:01-07-2020

ಪ್ರಸ್ತಾವನೆ:

1. ಮೇಲೆ ಓದಲಾದ (1) ರ ಆದೇಶದ ಪ್ಯಾರಾ (12) ರಲ್ಲಿ 2020-21 ರ ಮುಂಗಾರು ಹಂಗಾಮಿಗೆ ತೋಟಗಾರಿಕೆ ಬೆಳೆಗಳಾದ ಹಸಿರುಮೆಣಸಿನಕಾಯಿ, ಹೂಕೋಸು, ಅಡಿಕೆ, ಕರಿಮೆಣಸು, ವೀಳ್ಯದೆಲೆ, ದ್ರಾಕ್ಷಿ, ದಾಳಿಂಬೆ, ಸಿಂಪೆ, ಪರಂಗಿ ಮತ್ತು ಶುಂಠಿ ಬೆಳೆಗಳಿಗೆ ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಅರ್ಜಿ ಸಲ್ಲಿಸಿ ನೊಂದಾಯಿಸಲು ಅಂತಿಮ ದಿನಾಂಕವನ್ನು ಮುಂಗಾರು ಹಂಗಾಮಿಗೆ ದಿನಾಂಕ:30-06-2020 ಮತ್ತು ಮಾವು ಬೆಳೆಯನ್ನು ನೊಂದಾಯಿಸಲು 31.07.2020 ರವರೆಗೆ ನಿಗದಿಪಡಿಸಿ ಆದೇಶ ಹೊರಡಿಸಲಾಗಿರುತ್ತದೆ.
2. ಮೇಲೆ ಓದಲಾದ (2) ರಲ್ಲಿ, 2020-21, 2021-22 ಮತ್ತು 2022-23 ನೇ ಸಾಲುಗಳ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (RWBCIS) ಅನುಷ್ಠಾನ ಸಂಬಂಧ ಕ್ಲಸ್ಟರ್ ವಾರು ವಿಮಾ ಸಂಸ್ಥೆಗಳನ್ನು ನಿಗದಿಪಡಿಸಿ ಪ್ರೀಮಿಯಂ ದರಗಳನ್ನು ಅನುಮೋದಿಸಿ ಆದೇಶ ಹೊರಡಿಸಲಾಗಿರುತ್ತದೆ.
3. ಮೇಲೆ ಓದಲಾದ (3),(4) ಮತ್ತು (5) ರಲ್ಲಿ ಬೆಳೆ ವಿಮಾ ಅನುಷ್ಠಾನ ಕಂಪನಿಗಳಾದ ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ(AIC), SBI ಜನರಲ್ ಇನ್ಸೂರೆನ್ಸ್ ಕಂಪನಿ ಮತ್ತು HDFC ಅರ್ಗೋ ಜನರಲ್ ಇನ್ಸೂರೆನ್ಸ್ ಕಂಪನಿ ರವರು ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ರೈತರನ್ನು ನೊಂದಾಯಿಸಲು ಅಂತಿಮ ದಿನಾಂಕವನ್ನು ದಿನಾಂಕ:10-07-2020 ರವರೆಗೆ ವಿಸ್ತರಿಸಲು

...2

ಅಧಿಸೂಚಿಸಲಾದ ಟರ್ಮ್ ಶೀಟ್ ಗಳಲ್ಲಿ ರಿಸ್ಕ್ ಅವಧಿಯನ್ನು ಸೂಕ್ತವಾಗಿ ಕಡಿಮೆಗೊಳಿಸುವ ಷರತ್ತುಗಳೊಂದಿಗೆ ಒಪ್ಪಿರುತ್ತಾರೆ.

4. ಮೇಲೆ ಓದಲಾದ (6) ರಲ್ಲಿ ನೋಂದಣಿ ಅಂತಿಮ ದಿನಾಂಕವನ್ನು ದಿನಾಂಕ:30-06-2020 ರಿಂದ 10-07-2020 ರವರೆಗೆ ವಿಸ್ತರಿಸಲು ಅನುಮತಿ ಕೋರಿ, ವಿಮಾ ಸಂಸ್ಥೆಗಳ ಒಪ್ಪಿಗೆ ಮತ್ತು ಅವರ ಷರತ್ತುಗಳೊಂದಿಗೆ ವಿವರವಾದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

5. ಮೇಲೆ ಓದಲಾದ (7) ರಲ್ಲಿ ಕೇಂದ್ರ ಸರ್ಕಾರವು ನೋಂದಣಿ ಅಂತಿಮ ದಿನಾಂಕವನ್ನು ದಿನಾಂಕ:30-06-2020 ರಿಂದ 10-07-2020 ರವರೆಗೆ ವಿಸ್ತರಿಸಲು ಕೆಲವು ಷರತ್ತುಗಳೊಂದಿಗೆ ಅನುಮತಿ ನೀಡಿರುತ್ತದೆ.

6. ಸರ್ಕಾರದ ಆದೇಶ ಸಂಖ್ಯೆ:ತೋಇ 208 ತೋಸವಿ 2020 ದಿನಾಂಕ:25-06-2020 ರ ಪ್ಯಾರಾ (12) ರಲ್ಲಿ ತೋಟಗಾರಿಕೆ ಬೆಳೆಗಳಿಗೆ ನಿಗದಿಪಡಿಸಲಾಗಿದ್ದ ನೋಂದಣಿ ಅಂತಿಮ ದಿನಾಂಕ:30-06-2020ನ್ನು ಕೇಂದ್ರ ಸರ್ಕಾರದ ಅನುಮತಿಯಂತೆ ವಿಸ್ತರಿಸಿ ಈ ಮೂಲಕ ಮಾವು ಬೆಳೆ ಹೊರತು ಪಡಿಸಿ ಉಳಿದ ಎಲ್ಲಾ ಬೆಳೆಗಳಿಗೆ ಮುಂಗಾರು 2020 ಕ್ಕೆ ಸಂಬಂಧಿಸಿದಂತೆ ನೋಂದಣಿ ಅಂತಿಮ ದಿನಾಂಕವನ್ನು10-07-2020 ರವರೆಗೆ ವಿಸ್ತರಿಸಬೇಕಾಗಿರುತ್ತದೆ..

7. ನೋಂದಣಿ ದಿನಾಂಕ ವಿಸ್ತರಿಸಲಾದ ಅವಧಿಯಲ್ಲಿ (ದಿನಾಂಕ:01-07-2020 ರಿಂದ 10-07-2020ರ ವರೆಗೆ) ನೋಂದಣಿಯಾಗುವ ಎಲ್ಲಾ ರೈತರಿಗೆ (ಬೆಳೆ ಸಾಲ ಪಡೆದ/ಪಡೆಯದ), ಕೇಂದ್ರ ಸರ್ಕಾರದ ಅನುಮೋದನೆಯಂತೆ ರಿಸ್ಕ್ ಅವಧಿಯನ್ನು ಸೂಕ್ತವಾಗಿ ಕಡಿಮೆಗೊಳಿಸಬೇಕಾಗಿದ್ದು, ಇದಕ್ಕೆ ಪ್ರತ್ಯೇಕ ಹಾಗೂ ವಿವರವಾದ ಆದೇಶವನ್ನು ಹೊರಡಿಸಲಾಗುವುದು.

8. ವಿಮಾ ಕಂಪನಿಗಳು, ಮೂಲ ನೋಂದಣಿ ಅಂತಿಮ ದಿನಾಂಕದೊಳಗೆ (30-06-2020) ಪ್ರೀಮಿಯಂ ಅನ್ನು ಪಾವತಿಸಿದ ರೈತರ ಅರ್ಜಿಗಳಿಗೆ ಅಧಿಸೂಚಿಸಲಾದ ಟರ್ಮ್ ಶೀಟ್ ಗಳ ರಿಸ್ಕ್ ಅವಧಿಯಲ್ಲಿ ಯಾವುದೇ ಬದಲಾವಣೆಯಿಲ್ಲದೇ ಸಂಪೂರ್ಣ ರಿಸ್ಕ್ ಅವಧಿಯನ್ನು ವಿಮಾ ಪರಿಹಾರ ಮೊತ್ತ ಲೆಕ್ಕಾಚಾರ ಮಾಡಲು ಪರಿಗಣಿಸುವುದು. ಪ್ರೀಮಿಯಂ (ವಿಮಾ ಕಂತು) ಪಾವತಿ ಎಂದರೆ, ಸಾಲ ಪಡೆಯದ ರೈತರು ಬ್ಯಾಂಕ್ ಅಥವಾ ಸಾಮಾನ್ಯ ಸೇವಾ ಕೇಂದ್ರಗಳಿಗೆ ವಿಮಾ ಕಂತನ್ನು ಪಾವತಿಸುವುದು. ಸಾಲ ಪಡೆದ ರೈತರಿಗೆ ಪ್ರೀಮೀಯಂ ಪಾವತಿ ಎಂದರೆ ಸದರಿ ರೈತರ ಬ್ಯಾಂಕ್ ಸಾಲದ ಖಾತೆ ಅಥವಾ ಉಳಿತಾಯ ಖಾತೆಯಿಂದ ಪ್ರೀಮಿಯಂ ಕಟಾವಣೆ ಮಾಡುವುದು. ಇಂತಹ ಸಂದರ್ಭಗಳಲ್ಲಿ, ಬ್ಯಾಂಕ್ ಗಳು ಮತ್ತು ಸಾಮಾನ್ಯ ಸೇವಾ ಕೇಂದ್ರ (ಸಿ.ಎಸ್.ಸಿ)ಗಳು ಸಂರಕ್ಷಣೆ ತಂತ್ರಾಂಶದ ಮೂಲಕ ಪ್ರಸ್ತಾವನೆಗಳನ್ನು ಸಂಬಂಧಿಸಿದ ವಿಮಾ ಕಂಪನಿಗಳಿಗೆ ಕಳುಹಿಸಲು ಹಾಗೂ ರೈತರ ಪ್ರೀಮಿಯಂ ಮೊತ್ತವನ್ನು ಸಂಬಂಧಪಟ್ಟ ವಿಮಾ ಕಂಪನಿಗಳಿಗೆ ಪಾವತಿಸಲು ಅಂತಿಮ ದಿನಾಂಕವು 15-07-2020 ರಂದೇ ಮುಂದುವರೆಯುತ್ತದೆ.

9. ಬ್ಯಾಂಕ್ ಅಥವಾ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಮೂಲ ಅಂತಿಮ ದಿನಾಂಕದೊಳಗೆ (30-06-2020) ಸ್ವೀಕೃತವಾದ ಹಾಗೂ ವಿಸ್ತರಿಸಿದ ಅವಧಿಯಲ್ಲಿ ಸ್ವೀಕೃತವಾದ ಎಲ್ಲಾ ರೈತರ ಪ್ರೀಮಿಯಂ ವಿವರದ ದಿನಾಂಕವನ್ನು ಸಂರಕ್ಷಣೆ ತಂತ್ರಾಂಶದಲ್ಲಿ ನಿಖರವಾಗಿ ದಾಖಲಿಸುವುದು.

10. ಕೇಂದ್ರ ಸರ್ಕಾರದ ಅನುಮತಿ ಪತ್ರದಂತೆ, ಸಂರಕ್ಷಣೆ ತಂತ್ರಾಂಶದಲ್ಲಿ, ರೈತರು ಪ್ರಿಮೀಯಂ (ವಿಮಾ ಕಂತು) ಅನ್ನು ಪಾವತಿಸಿದ (ಸಾಲ ಪಡೆದ ರೈತರಿಗೆ ಸಂಬಂಧಿಸಿದಂತೆ ವಿಮಾ ಕಂತನ್ನು ಸಾಲದ ಖಾತೆ ಅಥವಾ ಉಳಿತಾಯ ಖಾತೆಯಿಂದ ಕಟಾವಣೆ ಮಾಡಿದ ದಿನಾಂಕ ಹಾಗೂ ಸಾಲ ಪಡೆಯದ ರೈತರಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ರೈತರು ಬ್ಯಾಂಕ್ ಅಥವಾ ಸಿ ಎಸ್ ಸಿ ಗೆ ಪಾವತಿಸಿದ ದಿನಾಂಕ) ವನ್ನು ದಾಖಲಿಸುವುದು. ಸಂಬಂಧಪಟ್ಟ ವಿಮಾ ಸಂಸ್ಥೆಗಳು ಈ ದಿನಾಂಕವನ್ನೇ ಒಪ್ಪಿಕೊಂಡು, ಮೂಲ ಅಂತಿಮ ದಿನಾಂಕದೊಳಗೆ ಹಾಗೂ ವಿಸ್ತರಿಸಿದ ಅಂತಿಮದಿನಾಂಕದ ಅವಧಿಯಲ್ಲಿ ನೋಂದಣಿ ಮಾಡಿದ ರೈತರನ್ನು ಗುರುತಿಸಿ ಕ್ರಮವಾಗಿ ಸಂಪೂರ್ಣ ರಿಸ್ಕ್ ಅವಧಿ

Maya

ಹಾಗೂ ಸೂಕ್ತವಾಗಿ ಕಡಿಮೆಗೊಳಿಸಿದ ರಿಸ್ಕ್ ಪ್ರಕಾರ ವಿಮಾ ಪರಿಹಾರ ಮೊತ್ತವನ್ನು ಪಾವತಿಸುವುದು. ಈ ಕುರಿತು ವಿಮಾ ಸಂಸ್ಥೆಗಳು ಯಾವುದೇ ಪರಿಶೀಲನೆ ಮಾಡುವಂತಿಲ್ಲ.

11. ವಿಸ್ತರಿಸಿದ ನೋಂದಣಿ ಅವಧಿಗೆ ಅನುಗುಣವಾಗಿ ಸಂಬಂಧಿಸಿದ ಮುಂದಿನ ಎಲ್ಲಾ ಅವಧಿಗಳನ್ನು ವಿಸ್ತರಿಸಬೇಕಾಗಿರುತ್ತದೆ. ಅದರಂತೆ ಬ್ಯಾಂಕುಗಳು ಅಥವಾ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ವಿಸ್ತರಿಸಲಾದ ದಿನಾಂಕದಿಂದ ನೋಂದಣಿ ಮಾಡಿಕೊಳ್ಳುವ ಎಲ್ಲಾ ರೈತರ ಪ್ರೀಮಿಯಂ ಮೊತ್ತ ಮತ್ತು ಪ್ರಸ್ತಾವನೆಗಳನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಸಂಬಂಧಿಸಿದ ವಿಮಾ ಕಂಪನಿಗಳಿಗೆ ಪಾವತಿಸಲು ಅಂತಿಮ ದಿನಾಂಕವು 25-07-2020 ಆಗಿರುತ್ತದೆ.

12. ಬೆಳೆ ಸಾಲ ಪಡೆದ ರೈತರು ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸದೇ ಇದ್ದಲ್ಲಿ, ಸಂಬಂಧಿಸಿದ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ನೋಂದಣಿಯ ಅಂತಿಮ ದಿನಾಂಕಕ್ಕಿಂತ ಏಳು (7) ದಿನಗಳು ಮುಂಚಿತವಾಗಿ ಎಂದರೆ ದಿನಾಂಕ: 03/07/2020 ಅಥವಾ ಅದರ ಒಳಗಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಯೋಜನೆಯಿಂದ ಕೈಬಿಡಲು ಅವಕಾಶವಿರುತ್ತದೆ. ಸಂಬಂಧಿಸಿದ ಬ್ಯಾಂಕ್ ಗಳು ಈ ರೀತಿ ಸ್ವೀಕರಿಸಲಾದ ಮುಚ್ಚಳಿಕೆ ಪತ್ರಗಳನ್ನು ದಾಖಲೆಗಳೊಂದಿಗೆ ವ್ಯವಸ್ಥಿತವಾಗಿ ನಿರ್ವಹಿಸಬೇಕಾಗಿರುತ್ತದೆ.

13. ವಿಸ್ತರಿಸಲಾದ ನೋಂದಣಿ ಅಂತಿಮ ದಿನಾಂಕಗಳಲ್ಲಿ ನೋಂದಣಿಯಾಗುವ ಪ್ರಸ್ತಾವನೆಗಳಿಗೆ ಸರ್ಕಾರದ ಆದೇಶ ಸಂಖ್ಯೆ:ತೋಇ 216 ತೋಸವಿ 2020 ಬೆಂಗಳೂರು ದಿನಾಂಕ:29-06-2020 ರಲ್ಲಿ ಅನುಮೋದಿಸಲಾದ ಪ್ರೀಮಿಯಂ ದರಗಳೇ ಅನ್ವಯಿಸುತ್ತವೆ. ವಿಸ್ತರಿಸಿದ ಅವಧಿಯಲ್ಲಿ ನೋಂದಣಿಯಾದ ಪ್ರಸ್ತಾವನೆಗಳಿಗೂ ಸಹ ಕೇಂದ್ರ ಸರ್ಕಾರದ ಪಾಲು ಅನ್ವಯಿಸುತ್ತದೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಮುಂದಿನಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ತೋಇ 208 ತೋಸವಿ 2020 ಬೆಂಗಳೂರು, ದಿನಾಂಕ:**01-07-2020

1. 2020-21 ರ ಮುಂಗಾರು ಹಂಗಾಮಿಗೆ ತೋಟಗಾರಿಕೆ ಬೆಳೆಗಳಾದ ಹಸಿರುಮೆಣಸಿನಕಾಯಿ, ಹೂಕೋಸು, ಅಡಿಕೆ, ಕರಿಮೆಣಸು, ವೀಳ್ಯದೆಲೆ, ದ್ರಾಕ್ಷಿ, ದಾಳಿಂಬೆ, ನಿಂಬೆ, ಪರಂಗಿ ಮತ್ತು ಶುಂಠಿ ಬೆಳೆಗಳಿಗೆ ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಅರ್ಜಿ ಸಲ್ಲಿಸಿ ನೊಂದಾಯಿಸಲು ಇದ್ದ ಅಂತಿಮ ದಿನಾಂಕ 30-06-2020 ಅನ್ನು 10-07-2020 ರವರೆಗೆ ವಿಸ್ತರಿಸಿ ಆದೇಶಿಸಿದೆ.
2. ಬೆಳೆ ಸಾಲ ಪಡೆದ ರೈತರು ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸದೇ ಇದ್ದಲ್ಲಿ, ಸಂಬಂಧಿಸಿದ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ನೋಂದಣಿಯ ಅಂತಿಮ ದಿನಾಂಕಕ್ಕಿಂತ ಏಳು (7) ದಿನಗಳು ಮುಂಚಿತವಾಗಿ ಎಂದರೆ ದಿನಾಂಕ: 03/07/2020 ಅಥವಾ ಅದರ ಒಳಗಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಯೋಜನೆಯಿಂದ ಕೈಬಿಡಲು ಅವಕಾಶವಿರುತ್ತದೆ. ಸಂಬಂಧಿಸಿದ ಬ್ಯಾಂಕ್ ಗಳು ಈ ರೀತಿ ಸ್ವೀಕರಿಸಲಾದ ಮುಚ್ಚಳಿಕೆ ಪತ್ರಗಳನ್ನು ದಾಖಲೆಗಳೊಂದಿಗೆ ವ್ಯವಸ್ಥಿತವಾಗಿ ನಿರ್ವಹಿಸಬೇಕಾಗಿರುತ್ತದೆ.
3. ನೋಂದಣಿ ದಿನಾಂಕ ವಿಸ್ತರಿಸಲಾದ ಅವಧಿಯಲ್ಲಿ (ದಿನಾಂಕ:01-07-2020 ರಿಂದ 10-07-2020ರ ವರೆಗೆ) ನೋಂದಣಿಯಾಗುವ ಎಲ್ಲಾ ರೈತರಿಗೆ (ಬೆಳೆ ಸಾಲ ಪಡೆದ/ಪಡೆಯದ), ಕೇಂದ್ರ ಸರ್ಕಾರದ

ಅನುಮೋದನೆಯಂತೆ ರಿಸ್ಕ್ ಅವಧಿಯನ್ನು ಸೂಕ್ತವಾಗಿ ಕಡಿಮೆಗೊಳಿಸಬೇಕಾಗಿದ್ದು, ಇದಕ್ಕೆ ಪ್ರತ್ಯೇಕ ಹಾಗೂ ವಿವರವಾದ ಆದೇಶವನ್ನು ಹೊರಡಿಸಲಾಗುವುದು.

4. ವಿಮಾ ಕಂಪನಿಗಳು, ಮೂಲ ನೋಂದಣಿ ಅಂತಿಮ ದಿನಾಂಕದೊಳಗೆ (30-06-2020) ಪ್ರೀಮಿಯಂ ಅನ್ನು ಪಾವತಿಸಿದ ರೈತರ ಅರ್ಜಿಗಳಿಗೆ ಅಧಿಸೂಚಿಸಲಾದ ಟರ್ಮ್ ಶೀಟ್ ಗಳ ರಿಸ್ಕ್ ಅವಧಿಯಲ್ಲಿ ಯಾವುದೇ ಬದಲಾವಣೆಯಿಲ್ಲದೇ ಸಂಪೂರ್ಣ ರಿಸ್ಕ್ ಅವಧಿಯನ್ನು ವಿಮಾ ಪರಿಹಾರ ಮೊತ್ತ ಲೆಕ್ಕಾಚಾರ ಮಾಡಲು ಪರಿಗಣಿಸುವುದು. ಪ್ರೀಮಿಯಂ (ವಿಮಾ ಕಂತು) ಪಾವತಿ ಎಂದರೆ, ಸಾಲ ಪಡೆಯದ ರೈತರು ಬ್ಯಾಂಕ್ ಅಥವಾ ಸಾಮಾನ್ಯ ಸೇವಾ ಕೇಂದ್ರಗಳಿಗೆ ವಿಮಾ ಕಂತನ್ನು ಪಾವತಿಸುವುದು ಎಂದು ಪರಿಗಣಿಸುವುದು ಹಾಗೂ ಸಾಲ ಪಡೆದ ರೈತರಿಗೆ ಪ್ರೀಮೀಯಂ ಪಾವತಿ ಎಂದರೆ ಸದರಿ ರೈತರ ಬ್ಯಾಂಕ್ ಸಾಲದ ಖಾತೆ ಅಥವಾ ಉಳಿತಾಯ ಖಾತೆಯಿಂದ ಪ್ರೀಮಿಯಂ ಕಟಾವಣೆ ಮಾಡುವುದು ಎಂದು ಪರಿಗಣಿಸುವುದು. ಇಂತಹ ಸಂದರ್ಭಗಳಲ್ಲಿ, ಬ್ಯಾಂಕ್ ಗಳು ಮತ್ತು ಸಾಮಾನ್ಯ ಸೇವಾ ಕೇಂದ್ರಗಳು ಸಂರಕ್ಷಣೆ ತಂತ್ರಾಂಶದ ಮೂಲಕ ಪ್ರಸ್ತಾವನೆಗಳನ್ನು ಸಂಬಂಧಿಸಿದ ವಿಮಾ ಕಂಪನಿಗಳಿಗೆ ಕಳುಹಿಸಲು ಹಾಗೂ ರೈತರ ಪ್ರೀಮಿಯಂ ಮೊತ್ತವನ್ನು ಸಂಬಂಧಪಟ್ಟ ವಿಮಾ ಕಂಪನಿಗಳಿಗೆ ಪಾವತಿಸಲು ಅಂತಿಮ ದಿನಾಂಕವು 15-07-2020 ರಂದೇ ಮುಂದುವರೆಯುತ್ತದೆ.

5. ಬ್ಯಾಂಕ್ ಅಥವಾ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಮೂಲ ಅಂತಿಮ ದಿನಾಂಕದೊಳಗೆ (30-06-2020) ಸ್ವೀಕೃತವಾದ ಹಾಗೂ ವಿಸ್ತರಿಸಿದ ಅವಧಿಯಲ್ಲಿ ಸ್ವೀಕೃತವಾದ ಎಲ್ಲಾ ರೈತರ ಪ್ರೀಮಿಯಂ ವಿವರದ ದಿನಾಂಕವನ್ನು ಸಂರಕ್ಷಣೆ ತಂತ್ರಾಂಶದಲ್ಲಿ ನಿಖರವಾಗಿ ದಾಖಲಿಸತಕ್ಕದ್ದು. ಇದರಲ್ಲಿ ಯಾವುದೇ ವ್ಯತ್ಯಾಸವಾದಲ್ಲಿ ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳು ಹಾಗೂ ಸಂಬಂಧಿಸಿದ ಸಿ.ಎಸ್.ಸಿ ಗಳೇ ಜವಾಬ್ದಾರರಾಗಿರುತ್ತಾರೆ..

6. ಕೇಂದ್ರ ಸರ್ಕಾರದ ಅನುಮತಿ ಪತ್ರದಂತೆ, ಸಂರಕ್ಷಣೆ ತಂತ್ರಾಂಶದಲ್ಲಿ, ರೈತರು ಪ್ರಿಮೀಯಂ (ವಿಮಾ ಕಂತು) ಅನ್ನು ಪಾವತಿಸಿದ (ಸಾಲ ಪಡೆದ ರೈತರಿಗೆ ಸಂಬಂಧಿಸಿದಂತೆ ವಿಮಾ ಕಂತನ್ನು ಸಾಲದ ಖಾತೆ ಅಥವಾ ಉಳಿತಾಯ ಖಾತೆಯಿಂದ ಕಟಾವಣೆ ಮಾಡಿದ ದಿನಾಂಕ ಹಾಗೂ ಸಾಲ ಪಡೆಯದ ರೈತರಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ರೈತರು ಬ್ಯಾಂಕ್ ಅಥವಾ ಸಿ ಎಸ್ ಸಿ ಗೆ ಪಾವತಿಸಿದ ದಿನಾಂಕ) ವನ್ನು ದಾಖಲಿಸುವುದು. ಸಂಬಂಧಪಟ್ಟ ವಿಮಾ ಸಂಸ್ಥೆಗಳು ಈ ದಿನಾಂಕವನ್ನೇ ಒಪ್ಪಿಕೊಂಡು, ಮೂಲ ಅಂತಿಮ ದಿನಾಂಕದೊಳಗೆ ಹಾಗೂ ವಿಸ್ತರಿಸಿದ ಅಂತಿಮ ದಿನಾಂಕದ ಅವಧಿಯಲ್ಲಿ ನೋಂದಣಿ ಮಾಡಿದ ರೈತರನ್ನು ಗುರುತಿಸಿ ಕ್ರಮವಾಗಿ ಸಂಪೂರ್ಣ ರಿಸ್ಕ್ ಅವಧಿ ಅಥವಾ ಸೂಕ್ತವಾಗಿ ಕಡಿಮೆಗೊಳಿಸಿದ ರಿಸ್ಕ್ ಪ್ರಕಾರ ವಿಮಾ ಪರಿಹಾರ ಮೊತ್ತವನ್ನು ಪಾವತಿಸುವುದು. ಸಂರಕ್ಷಣೆ ತಂತ್ರಾಂಶದಲ್ಲಿ ದಾಖಲಿಸಿದ ನೋಂದಣಿ ದಿನಾಂಕ ಕುರಿತು ವಿಮಾ ಸಂಸ್ಥೆಗಳು ಯಾವುದೇ ಪರಿಶೀಲನೆ ಮಾಡುವಂತಿಲ್ಲ.

7. ವಿಸ್ತರಿಸಿದ ನೋಂದಣಿ ಅವಧಿಗೆ ಅನುಗುಣವಾಗಿ ಸಂಬಂಧಿಸಿದ ಮುಂದಿನ ಎಲ್ಲಾ ಅವಧಿಗಳನ್ನು ವಿಸ್ತರಿಸಲಾಗಿರುತ್ತದೆ. ಆದರಂತೆ ಬ್ಯಾಂಕುಗಳು ಅಥವಾ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ವಿಸ್ತರಿಸಲಾದ ಅವಧಿಯಲ್ಲಿ ನೋಂದಣಿ ಮಾಡಿಕೊಳ್ಳುವ ಎಲ್ಲಾ ರೈತರ ಪ್ರೀಮಿಯಂ ಮೊತ್ತ ಮತ್ತು ಪ್ರಸ್ತಾವನೆಗಳನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಸಂಬಂಧಿಸಿದ ವಿಮಾ ಕಂಪನಿಗಳಿಗೆ ಪಾವತಿಸಲು ಅಂತಿಮ ದಿನಾಂಕವು 25-07-2020 ಆಗಿರುತ್ತದೆ.

...5

8. ವಿಸ್ತರಿಸಲಾದ ನೋಂದಣಿ ಅಂತಿಮ ದಿನಾಂಕಗಳಲ್ಲಿ ನೋಂದಣಿಯಾಗುವ ಪ್ರಸ್ತಾವನೆಗಳಿಗೂ ಸರ್ಕಾರದ ಆದೇಶ ಸಂಖ್ಯೆ:ತೋಇ 216 ತೋಸವಿ 2020 ಬೆಂಗಳೂರು ದಿನಾಂಕ:29-06-2020 ರಲ್ಲಿ ಅನುಮೋದಿಸಲಾದ ಪ್ರೀಮಿಯಂ ದರಗಳು ಅನ್ವಯಿಸುತ್ತವೆ. ವಿಸ್ತರಿಸಿದ ಅವಧಿಯಲ್ಲಿ ನೋಂದಣಿಯಾದ ಪ್ರಸ್ತಾವನೆಗಳಿಗೂ ಸಹ ಕೇಂದ್ರ ಸರ್ಕಾರದ ಪಾಲು ಅನ್ವಯಿಸುತ್ತದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

01/07/2020
(ಟಿ. ಮಂಜಪ್ಪ)
**ಸರ್ಕಾರದ ಅಧೀನ ಕಾರ್ಯದರ್ಶಿ**
**ತೋಟಗಾರಿಕೆ ಇಲಾಖೆ**
01/07/2020

**ರವರಿಗೆ,**

1. ಪ್ರಧಾನ ಮಹಾಲೇಖಪಾಲರು (ಎ&ಇ)/(ಜಿ&ಎಸ್.ಎಸ್.ಎ)/(ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್, ಬೆಂಗಳೂರು.
6. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
7. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ನಿರ್ದೇಶಕರು, ಕೆ.ಎಸ್.ಎನ್.ಡಿ.ಎಂ.ಸಿ, ಯಲಹಂಕ, ಬೆಂಗಳೂರು – (ನಿರ್ದೇಶಕರು ತೋಟಗಾರಿಕೆ ಇಲಾಖೆ ಮುಖಾಂತರ).
9. ಕನ್ವೀನರ್, ರಾಜ್ಯ ಮಟ್ಟದ ಬ್ಯಾಂಕರ್ ಗಳ ಸಮಿತಿ (SLBC), ಬೆಂಗಳೂರು
10. ವ್ಯವಸ್ಥಾಪಕ ನಿರ್ದೇಶಕರು, ಕೆ ಎಸ್ ಸಿ ಅಪೆಕ್ಸ್ ಬ್ಯಾಂಕ್, ಚಾಮರಾಜಪೇಟೆ, ಬೆಂಗಳೂರು
11. ಎಲ್ಲಾ ಜಿಲ್ಲಾಧಿಕಾರಿಗಳು – (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
12. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).

13. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಹಾಗೂ ತೋಟಗಾರಿಕೆ ಉಪ ನಿರ್ದೇಶಕರು - ಎಲ್ಲಾ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
14. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು-(ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
15. ಎಲ್ಲಾ ಲೀಡ್ ಬ್ಯಾಂಕುಗಳು – (ಎಸ್.ಎಲ್.ಬಿ.ಸಿ. ಮುಖಾಂತರ).
16. ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು- (ಅಪೆಕ್ಸ್ ಬ್ಯಾಂಕ್‌ನ ಮುಖಾಂತರ).
17. ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು –( ಎಸ್.ಎಲ್.ಬಿ.ಸಿ. ಮುಖಾಂತರ).
18. ಎಲ್ಲಾ ನೋಡಲ್ ಬ್ಯಾಂಕುಗಳು – (ಎಸ್.ಎಲ್.ಬಿ.ಸಿ. ಮುಖಾಂತರ).
19. ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು.
20. ವ್ಯವಸ್ಥಾಪಕ ನಿರ್ದೇಶಕರು, SBI ಜನೆರಲ್ ಇನ್ಸುರೆನ್ಸ್ ಕಂಪನಿ.
21. ವ್ಯವಸ್ಥಾಪಕ ನಿರ್ದೇಶಕರು, HDFC ಎರ್ಗೋ ಜನೆರಲ್ ಇನ್ಸುರೆನ್ಸ್ ಕಂಪನಿ.
22. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.
23. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
24. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
25. ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿಯ ಎಲ್ಲಾ ಸದಸ್ಯರಿಗೆ.
26. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
27. ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
28. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
29. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
30. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
31. ಕಂಪೈಲರ್, ಕರ್ನಾಟಕ ಗೆಜೆಟ್, ಬೆಂಗಳೂರು, ಇವರು ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು.